**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಕರ್ನಾಟಕ ರಾಜ್ಯ ಯೋಜನಾ ಮಂಡಳಿ ಹಾಗೂ ಎಸ್‌-3 ಶಾಖೆಯಲ್ಲಿ ಖಾಲಿ ಇರುವ ಒಟ್ಟು 2 ಗ್ರೂಪ್ – ಡಿ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೇವೆ ಒದಗಿಸಲು ಮೆ: ಶ್ರೀ ಎಂಟರ್‌ಪ್ರೈಸಸ್‌, ಬೆಂಗಳೂರು, ಇವರಿಗೆ ಸರ್ಕಾರದ ಮಂಜೂರಾತಿ ನೀಡುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರಿ ಆದೇಶ ಸಂಖ್ಯೆ: ಪಿಡಿ 139 ಎಸ್‌ಪಿಬಿ 2009, ದಿನಾಂಕ:27.12.2010 ಮತ್ತು ಸಮಸಂಖ್ಯೆಯ ತಿದ್ದುಪಡಿ ದಿನಾಂಕ:27.1.2011.
2) ಸರ್ಕಾರಿ ಆದೇಶ ಸಂಖ್ಯೆ ಪಿಡಿ 35 ಎಸ್‌ಪಿಬಿ 2014, ದಿನಾಂಕ: 30.12.2014.

**ಪ್ರಸ್ತಾವನೆ:**

ಯೋಜನಾ ಇಲಾಖೆಯ ಎಸ್‌-3 ಶಾಖೆ ಮತ್ತು ರಾಜ್ಯ ಯೋಜನಾ ಮಂಡಳಿಯ ಜಂಟಿ ಕಾರ್ಯದರ್ಶಿಗಳ ಆಪ್ತ ಶಾಖೆಯಲ್ಲಿ ಖಾಲಿ ಇರುವ ಒಟ್ಟು ಎರಡು ಗ್ರೂಪ್ 'ಡಿ' ಹುದ್ದೆಗಳಿಗೆ ಕೆಲವೊಂದು ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಹೊರಗುತ್ತಿಗೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ಒದಗಿಸುವಂತೆ ಮೆ: ಶ್ರೀ ಎಂಟರ್ ಪ್ರೈಸಸ್ ಏಜೆನ್ಸಿ, ಬೆಂಗಳೂರು, ಇವರಿಗೆ ಮೇಲೆ ಓದಲಾದ (1)ರ ಆದೇಶ ಹಾಗೂ ತಿದ್ದುಪಡಿಯನ್ವಯ, ಮಂಜೂರಾತಿ ನೀಡಲಾಗಿರುತ್ತದೆ. ಸದರಿ ಸಂಸ್ಥೆಯ ಸಿಬ್ಬಂದಿ ಸೇವೆಯು ತೃಪ್ತಿಕರವಾಗಿರುವುದರಿಂದ ಸಿಬ್ಬಂದಿ ಸೇವೆ ಅವಧಿಯನ್ನು ಮೇಲೆ ಓದಲಾದ (2) ರ ಸರ್ಕಾರಿ ಆದೇಶದಲ್ಲಿ ವಿಸ್ತರಿಸಲಾಗಿದ್ದು, ಸದರಿ ಅವಧಿಯು ದಿನಾಂಕ: 2.12.2015ಕ್ಕೆ ಅಂತ್ಯಗೊಂಡಿರುತ್ತದೆ.

ರಾಜ್ಯ ಯೋಜನಾ ಮಂಡಳಿಗೆ ಸಿಬ್ಬಂದಿ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದು, ಅಂತಿಮ ತೀರ್ಮಾನ ಆಗಿರುವುದಿಲ್ಲ. ರಾಜ್ಯ ಯೋಜನಾ ಮಂಡಳಿಗೆ ಸಿಬ್ಬಂದಿ ಸೇವೆ ಅಗತ್ಯವಾಗಿರುವುದರಿಂದ ಡಿಸೆಂಬರ್ 2015ರ ಮಾಹೆಯಲ್ಲಿ ಶ್ರೀ ಎಂಟರ್‌ಪ್ರೈಸಸ್‌, ಬೆಂಗಳೂರು ಈ ಸಂಸ್ಥೆಯಿಂದ ಪ್ರಸ್ತುತ ಚಾಲ್ತಿಯಲ್ಲಿರುವ ಸಂಚಿತ ವೇತನದಲ್ಲೇ ಹೊರಗುತ್ತಿಗೆ ಆಧಾರದ ಮೇಲೆ ಇಬ್ಬರು ಗ್ರೂಪ್ ಡಿ ನೌಕರರ ಸೇವೆಯನ್ನು ಪಡೆಯಲಾಗಿದೆ.

ಈ ಬಗ್ಗೆ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ ಪಿಡಿ 94 ಎಸ್‌ಪಿಬಿ 2015, ಬೆಂಗಳೂರು, ದಿನಾಂಕ: 30.01.2016**

ಮೆ: ಶ್ರೀ ಎಂಟರ್‌ಪ್ರೈಸಸ್‌, ಬೆಂಗಳೂರು, ಇವರ ಸಿಬ್ಬಂದಿ ಸೇವಾ ಪೂರೈಕೆಯು ತೃಪ್ತಿಕರವಾಗಿರುವುದರಿಂದ ಅನುಬಂಧದಲ್ಲಿ ನಮೂದಿಸಲಾಗಿರುವ ಷರತ್ತು ಮತ್ತು ನಿಬಂಧನೆಗಳನ್ವಯ ಕಾರ್ಯದರ್ಶಿ ಹಾಗೂ ಸದಸ್ಯ ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ, ಇವರ ಆಪ್ತ ಶಾಖೆಯಲ್ಲಿ ಖಾಲಿಯಿರುವ ಒಂದು ಗ್ರೂಪ್ 'ಡಿ' ಹುದ್ದೆ ಹಾಗೂ ಯೋಜನಾ ಇಲಾಖೆಯ ಎಸ್‌-3 ಶಾಖೆಯಲ್ಲಿ ಖಾಲಿ ಇರುವ ಒಂದು ಗ್ರೂಪ್ 'ಡಿ' ಹುದ್ದೆ ಒಟ್ಟು 2 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೇವೆಯನ್ನು ದಿನಾಂಕ3.12.2015 ರಿಂದ ಜಾರಿಗೆ ಬರುವಂತೆ 31.12.2015ರವರೆಗೆ ಹಾಲಿ ನೀಡಲಾಗುತ್ತಿರುವ ಸಂಚಿತ ವೇತನದ ದರದಲ್ಲಿಯೇ ಮೆ: ಶ್ರೀ ಎಂಟರ್‌ಪ್ರೈಸಸ್‌, ಬೆಂಗಳೂರು ಇವರು ಒದಗಿಸಿರುವುದಕ್ಕೆ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ ಆಯವ್ಯಯ ಲೆಕ್ಕ ಶೀರ್ಷಿಕೆ 3451-00-101-4-00 (ಯೋಜನೇತರ) ಯಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 4 ಟಿಎಫ್‌ಪಿ 2015, ದಿನಾಂಕ: 9.10.2015ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

([illegible])
ಸರ್ಕಾರದ ಅಧೀನ ಕಾರ್ಯದರ್ಶಿ-3
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಪ್ರತಿಗೆ:

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ (ಗ್ರೇಡ್ – 1), ಬಹುಮಹಡಿ ಕಟ್ಟಡ, ಬೆಂಗಳೂರು
3. ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.
4. ಸರ್ಕಾರದ ಉಪ ಕಾರ್ಯದರ್ಶಿಗಳು(ಆಡಳಿತ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-6), ವಿಧಾನ ಸೌಧ, ಬೆಂಗಳೂರು
7. ಸರ್ಕಾರದ ಅಧೀನ ಕಾರ್ಯದರ್ಶಿ (1 ಮತ್ತು 2), ಯೋಜನೆ ಮತ್ತು ಕಾರ್ಯಕ್ರಮ ಸಂಯೋಜನೆ ಇಲಾಖೆ – ಕಾಂಪೆಂಡಿಯಂಗಾಗಿ.
8. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ(ಆಡಳಿತ-3)
9. ಮೆ: ಶ್ರೀ ಎಂಟರ್ ಪ್ರೈಸಸ್, ನಂ.899, 8ನೇ ಮುಖ್ಯ ರಸ್ತೆ, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು-560 079
10. ಸಹಾಯಕ ಆಡಳಿತಾಧಿಕಾರಿ, ರಾಜ್ಯ ಯೋಜನಾ ಮಂಡಳಿ(ಎಸ್-3)
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಅನುಬಂಧ

1) ಸಂಸ್ಥೆಯೊಡನೆ ಸರ್ಕಾರದ ಒಪ್ಪಂದವು ದಿನಾಂಕ: 3.12.2015ರಿಂದ 31.12.2015ರ ಅವಧಿಗೆ ಜಾರಿಯಲ್ಲಿರುತ್ತದೆ.

2) ಸಂಸ್ಥೆಯು ಸರ್ಕಾರಿ ಕಾಯ್ದೆಯಡಿಯಲ್ಲಿ ನೋಂದಾಯಿಸಲ್ಪಟ್ಟಿರಬೇಕು ಹಾಗೂ ಕಾರ್ಮಿಕ ನಿಯಮಗಳನ್ನು ಅನುಸರಿಸಬೇಕು.

3) ಸಂಸ್ಥೆಯು ಇಲಾಖೆಗೆ ಸೂಕ್ತ ಅನುಭವಿ ನೌಕರರನ್ನು ಒದಗಿಸಬೇಕು ಹಾಗೂ ಅವರ ಹೆಸರು, ವಿಳಾಸ (ತಾತ್ಕಾಲಿಕ ಮತ್ತು ಶಾಶ್ವತ) ದೂರವಾಣಿ ಸಂಖ್ಯೆ ಮತ್ತಿತರೆ ವೈಯಕ್ತಿಕ ವಿವರಗಳನ್ನು ನಿರ್ವಹಿಸಬೇಕು.

4) ಯಾವುದೇ ನಿರ್ದಿಷ್ಟ ತಿಂಗಳಲ್ಲಿ ಕರ್ತವ್ಯ ನಿರ್ವಹಿಸಿರುವುದಕ್ಕೆ ಮಾತ್ರ ನೌಕರರಿಗೆ ವೇತನ ಪಾವತಿಸಲಾಗುವುದು.

5) ಹಾಲಿ ಜಾರಿಯಲ್ಲಿರುವ ನಿಯಮಗಳನುಸಾರ ಸಂಸ್ಥೆಯು ನಿಯಮಿತವಾಗಿ ಮಾಲೀಕರು ಮತ್ತು ನೌಕರರ ಪಾಲಿನ ಪಿ.ಎಫ್. ದೇಣಿಗೆಯನ್ನು ಪಾವತಿಸತಕ್ಕದ್ದು.

6) ಸಂಸ್ಥೆಯು ಪಿ.ಎಫ್/ತೆರಿಗೆಗಳು/ಸೆಸ್ ಅನ್ನು ಜಮೆ ಮಾಡಿರುವ ಬಗ್ಗೆ ಹಾಗೂ ರಾಷ್ಟ್ರೀಕೃತ ಬ್ಯಾಂಕ್ ಮೂಲಕ ನೌಕರರಿಗೆ ವೇತನ ಪಾವತಿಸಿರುವ ಬಗ್ಗೆ ಸರ್ಕಾರಕ್ಕೆ ದಾಖಲೆಯನ್ನು ಒದಗಿಸತಕ್ಕದ್ದು. ಇಲ್ಲದಿದ್ದಲ್ಲಿ ಸಂಸ್ಥೆಗೆ ಪಾವತಿಸುವ ಮೊತ್ತವನ್ನು ತಡೆಹಿಡಿಯಲಾಗುವುದು.

7) ನೌಕರರಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಭವಿಷ್ಯನಿಧಿ ಆಯುಕ್ತರು ನಿರ್ವಹಿಸಿರುವ ಖಾತೆಗಳ ವಾರ್ಷಿಕ ಹೇಳಿಕೆಗಳನ್ನು (Annual Statement of Account) ಆರ್ಥಿಕ ವರ್ಷದ ಕೊನೆಯಲ್ಲಿ ಸರ್ಕಾರಕ್ಕೆ ಒದಗಿಸತಕ್ಕದ್ದು.

8) ನೌಕರರು ಕ್ಯಾಲೆಂಡರ್ ವರ್ಷದಲ್ಲಿ 15 ದಿನಗಳ ಸಾಂದರ್ಭಿಕ ರಜೆಗೆ ಮಾತ್ರ ಅರ್ಹರಿರುತ್ತಾರೆ.

9) ನೌಕರರು ಕರ್ತವ್ಯಕ್ಕೆ ಗೈರು ಹಾಜರಾದಲ್ಲಿ ಅಥವಾ ನೌಕರರ ವಿರುದ್ಧ ಪ್ರತಿಕೂಲ ವರದಿ ಬಂದಲ್ಲಿ ಸಂಸ್ಥೆಯು ತಕ್ಷಣವೇ ಪರ್ಯಾಯ ವ್ಯವಸ್ಥೆ ಮಾಡತಕ್ಕದ್ದು.

10) ಸಂಸ್ಥೆಯು ನೌಕರರಿಗೆ ಪ್ರತಿ ತಿಂಗಳ 7ನೇ ತಾರೀಖಿನೊಳಗೆ ವೇತನವನ್ನು ಪಾವತಿಸತಕ್ಕದ್ದು.

11) ಪ್ರತಿ ಮಾಹೆ ಅಂತ್ಯಗೊಂಡ ನಂತರ ಸಮರ್ಪಕ ಬಿಲ್ಲನ್ನು ಸಲ್ಲಿಸಿದ ನಂತರವೇ ಹಣ ಪಾವತಿ ಪ್ರಕ್ರಿಯೆ ಕೈಗೊಂಡು ಸಂಬಂಧಿಸಿದ ಸಂಸ್ಥೆಗೆ ಚೆಕ್ ಮೂಲಕ ಸಂದಾಯ ಮಾಡಲಾಗುವುದು.

12) ನೌಕರರ ನಿರ್ಲಕ್ಷ್ಯತೆಯಿಂದ ಸರ್ಕಾರಕ್ಕೆ ನಷ್ಟ ಸಂಭವಿಸಿದಲ್ಲಿ ಸದರಿ ನಷ್ಟವನ್ನು ನೌಕರರೇ ಭರಿಸತಕ್ಕದ್ದು ಹಾಗೂ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

13) ನೌಕರರು ಸಂಸ್ಥೆಯ ಸಿಬ್ಬಂದಿಯಾಗಿದ್ದು, ಸರ್ಕಾರದ ಸಿಬ್ಬಂದಿಯಾಗಿರುವುದಿಲ್ಲ. ಕರಾರಿನಲ್ಲಿರುವ ಷರತ್ತುಗಳನ್ನು ಹೊರತುಪಡಿಸಿ ಯಾವುದೇ ಕ್ಲೇಮುಗಳನ್ನು ಅಥವಾ ಸೌಲಭ್ಯಗಳನ್ನು ಸರ್ಕಾರದಿಂದ ಕ್ಲೇಮು ಮಾಡತಕ್ಕದ್ದಲ್ಲ.

14) ಅಸಮರ್ಪಕ ಸಿಬ್ಬಂದಿ ಸೇವೆ ಕಂಡುಬಂದಲ್ಲಿ ಅವಧಿಗೆ ಮೊದಲೇ ಸರ್ಕಾರವು ಯಾವುದೇ ಕಾರಣ ನೀಡದೇ ಒಂದು ತಿಂಗಳ ಸೂಚನೆ ನೀಡಿ ಒಪ್ಪಂದವನ್ನು ಮುಕ್ತಾಗೊಳಿಸುವ ಹಕ್ಕನ್ನು ಹೊಂದಿರುತ್ತದೆ ಅಲ್ಲದೆ ಕರಾರಿನಲ್ಲಿರುವ ಷರತ್ತುಗಳ ಉಲ್ಲಂಘನೆಯಾದಲ್ಲಿ ಯಾವುದೇ ಸೂಚನೆ ನೀಡದೇ ಕರಾರನ್ನು ರದ್ದುಗೊಳಿಸುವ ಹಕ್ಕನ್ನು ಸಹ ಹೊಂದಿರುತ್ತದೆ.

(ಲಲಿತಾ)
ಸರ್ಕಾರದ ಅಧೀನ ಕಾರ್ಯದರ್ಶಿ (ಎಸ್-3)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.